ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 25–07–2017

## ಪತ್ರಿಕಾ ಪ್ರಕಟಣೆ

# ಪೊಲೀಸ್ ಇಲಾಖೆಯಲ್ಲಿ ಅಶಿಸ್ತು ಸಹಿಸುವುದಿಲ್ಲ– ಮುಖ್ಯಮಂತ್ರಿ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಶಿಸ್ತಿಗೆ ಹೆಸರಾಗಿರುವ ಪೊಲೀಸ್ ಇಲಾಖೆಯಲ್ಲಿ 'ಅಶಿಸ್ತು' ಯಾವುದೇ ಕಾರಣಕ್ಕೂ ತಲೆದೋರಬಾರದು. ಪೊಲೀಸ್ ಇಲಾಖೆಯಲ್ಲಿನ ಅಶಿಸ್ತನ್ನು ಸರ್ಕಾರ ಎಂದಿಗೂ ಸಹಿಸುವುದಿಲ್ಲ ಮತ್ತು ಕಠಿಣ ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ತಿಳಿಸಿದರು.

ವಿಧಾನ ಸೌಧ ಬೃಹತ್ ಮೆಟ್ಟಿಲುಗಳ ಮುಂಭಾಗ ಇಂದು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ವತಿಯಿಂದ ಆಯೋಜಿಸಲಾಗಿದ್ದ ಕರ್ನಾಟಕ ದರ್ಶನ ಸೈಕಲ್ ಜಾಥಾ ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು, ಪೊಲೀಸರು ಆತ್ಮಸ್ಥೈರ್ಯವನ್ನು ಹೊಂದಿರಬೇಕು, ಕ್ರಿಯಾಶೀಲರಾಗಿ, ಸಮಾಜಮುಖಿಯಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪೊಲೀಸರು ದೈಹಿಕವಾಗಿ ಸದೃಢವಾಗಿರಬೇಕು ಮತ್ತು ಮಾನಸಿಕವಾಗಿ ಸಮರ್ಥರಾಗಿರಬೇಕು ಹೀಗಿದ್ದಾಗ ಮಾತ್ರ ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯ . .ಇದು ಕರ್ತವ್ಯದ ಒಂದು ಭಾಗ ಎಂದು ಪೊಲೀಸರು ಭಾವಿಸಬೇಕು ಎಂದು ತಿಳಿಸಿದರು. ಸಾರ್ವಜನಿಕರ ಜೊತೆ ಪೊಲೀಸರ ಸಂಬಂಧ ಉತ್ತಮವಾಗಿರಬೇಕು. ಮಧುರವಾದ ಬಾಂಧವ್ಯವನ್ನು ಹೊಂದಬೇಕು. ಪೊಲೀಸರು ಜನಸ್ನೇಹಿಯಾಗಿದ್ದಾರೆ ಎಂಬ ಭಾವನೆ ಜನರಲ್ಲಿ ಬರಬೇಕು ಎಂದರು.

ಕೆ.ಎಸ್.ಆರ್.ಪಿ. ಪೊಲೀಸರು ಬಹುತೇಕ ಸಂದರ್ಭದಲ್ಲಿ ಒತ್ತಡದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಸಮಾಜದ ಸ್ವಾಸ್ಥ ಕಾಪಾಡುವುದು, ಪ್ರತಿಯೊಬ್ಬ ಪ್ರಜೆಯ ರಕ್ಷಣೆ, ಆಸ್ತಿ ರಕ್ಷಣೆ ಪೊಲೀಸ್ ಇಲಾಖೆಯ ಬಹುದೊಡ್ಡ ಜವಾಬ್ದಾರಿ ಎಂದರು.

ಸಮಾಜದಲ್ಲಿ ಅನೇಕ ದುಷ್ಟಶಕ್ತಿಗಳು ಇರುತ್ತವೆ. ಸಾಮರಸ್ಯ, ನೆಮ್ಮದಿ ಬಯಸುವ ಜನರಿಗೆ ಆಗಾಗ ತೊಂದರೆ ಉದ್ಭವವಾಗುತ್ತಿರುತ್ತವೆ. ಅಂತಹ ಸಂದರ್ಭದಲ್ಲಿ ಸಮಾಜದಲ್ಲಿ ಸಾಮರಸ್ಯ ಕಾಪಾಡುವುದು ಅವಶ್ಯ. ಕಾನೂನು ಸುವ್ಯವಸ್ಥೆ ಕಾಪಾಡುವಾಗ ಕೆಲವು ಬಾರಿ ಪೊಲೀಸರು ಕಠಿಣವಾಗಿ ವರ್ತಿಸಬೇಕಾಗುತ್ತದೆ ಎಂದರು.

ಹಿರಿಯ ಪೊಲೀಸರು ಅಧಿಕಾರಿಗಳು ಕಿರಿಯ ಅಧಿಕಾರಿಗಳ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಮತ್ತು ಅವರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸ್ಪಂಧಿಸುವುದು ಹಿರಿಯ ಅಧಿಕಾರಿಗಳ ಕರ್ತವ್ಯಗಳ ಒಂದು ಭಾಗ ಎಂದರು.

ಸೈಕಲ್ ಜಾಥಾದಲ್ಲಿ ಭಾಗವಹಿಸಿದ್ದ 59 ಮಂದಿ ಪೊಲೀಸ್ ಕ್ರೀಡಾಪಟುಗಳು ಮತ್ತು ಕೆ.ಎಸ್.ಆರ್.ಪಿ. ಎಡಿಜಿಪಿ ಭಾಸ್ಕರ್‌ರಾವ್ ಸೇರಿದಂತೆ ಪೊಲೀಸ್ ಅಧಿಕಾರಿಗಳಾದ ಅಯ್ಯಪ್ಪ ಮತ್ತು ಸಮಂತ್ ಅವರುಗಳನ್ನು ಇದೇ ಸಂದರ್ಭ ಮುಖ್ಯಮಂತ್ರಿಗಳು ಸನ್ಮಾನಿಸಿ ಪ್ರಶಂಸನಾ ಪತ್ರ ಮತ್ತು ನೆನಪಿನ ಕಾಣಿಕೆ ವಿತರಿಸಿದರು.

ಡಿ.ಜಿ.ಐ.ಜಿ.ಪಿ. ರೂಪಕ್‌ಕುಮಾರ್ ದತ್ತ ಅವರು ವೇದಿಕೆ ಮೇಲೆ ನೆರೆದಿದ್ದ ಗಣ್ಯರನ್ನು ಸ್ವಾಗತಿಸಿ ಪ್ರಾಸ್ತವಿಕವಾಗಿ ಮಾತನಾಡುತ್ತಾ ಕೆ.ಎಸ್.ಆರ್.ಪಿ. ಸೈಕಲಿಸ್ಟ್ ಕ್ರೀಡಾಪಟುಗಳು ಜುಲೈ 12, 2017 ರಂದು ಬೀದರ್‌ನಿಂದ ಪ್ರಾರಂಭಿಸಿ 14 ದಿನಗಳಕಾಲ 1750 ಕಿ.ಮಿ. ಕ್ರಮಿಸಿ ಮಾಗಡಿ ಮೂಲಕ ರಾಜ್ಯದ ಶಕ್ತಿಕೇಂದ್ರ ವಿಧಾನಸೌಧವನ್ನು ಇಂದು ಪ್ರವೇಶಿಸಿದ್ದಾರೆ. ಸಾಮಾಜಿಕ ಐಕ್ಯತೆ, ಪೊಲೀಸ್ ಸಾರ್ವಜನಿಕರ ನಡುವೆ ಉತ್ತಮ ಬಾಂಧವ್ಯ ಪರಿಸರ ರಕ್ಷಣೆ ಕ್ರೀಡಾ ಮನೋಭಾವ, ಸ್ವಚ್ಛತೆ ಇವುಗಳ ಕುರಿತು ಜಾಥಾದುದ್ದಕ್ಕೂ ಸಾರ್ವಜನಿಕರಲ್ಲಿ ಅರಿವು ಮೂಡಿಸಿದ್ದಾರೆ. ಒಟ್ಟು 28 ಜಿಲ್ಲೆಗಳನ್ನು ಕ್ರಮಿಸಿದ್ದಾರೆ ಎಂದು ವಿವರಿಸಿದರು.

ಕ್ರೀಡಾ ಯುವಸಬಲೀಕರಣ ಮತ್ತು ಮೀನುಗಾರಿಕೆ ಸಚಿವ ಪ್ರಮೋದ್ ಮಧ್ವರಾಜ್ ಅವರು ಇದೇ ಸಂದರ್ಭ 5.00 ಲಕ್ಷ ರೂ.ಗಳ ಚೆಕ್ಕನ್ನು ಕೆ.ಎಸ್.ಆರ್.ಪಿ.ಗೆ ಹಸ್ತಾಂತರಿಸಿದರು.

ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ಕರ್ನಾಟಕ ಒಲಂಪಿಕ್ ಸಂಸ್ಥೆ ಅಧ್ಯಕ್ಷರಾದ ಕೆ. ಗೋವಿಂದರಾಜ್, ಗೃಹಸಚಿವರ ಸಲಹೆಗಾರ ಕೆಂಪಯ್ಯ, ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಸುಭಾಶ್‌ಚಂದ್ರ ಅವರುಗಳು ಉಪಸ್ಥಿತರಿದ್ದರು.

ಮಮತ

## ಸಿರಿಧಾನ್ಯಗಳ ಉಪಯೋಗ ಹಾಗೂ ಸಕ್ಕರೆ ಪದಾರ್ಥಗಳ ತ್ಯಜಿಸುವ ಮೂಲಕ ಪ್ರತಿಯೊಬ್ಬರು ಆರೋಗ್ಯಕರ ಜೀವನ ನಡೆಸುವಂತಾಗಬೇಕು – ಸಚಿವ ಕೃಷ್ಣಬೈರೇಗೌಡ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಉತ್ತಮ ಜೀವನ ಶೈಲಿ ರೂಪಿಸಿಕೊಂಡು, ಸಿರಿಧಾನ್ಯಗಳ ಉಪಯೋಗ ಹಾಗೂ ಸಕ್ಕರೆ ಪದಾರ್ಥಗಳ ತ್ಯಜಿಸುವ ಮೂಲಕ ಪ್ರತಿಯೊಬ್ಬರು ಆರೋಗ್ಯಕರ ಜೀವನ ನಡೆಸುವಂತಾಗಬೇಕು ಎಂದು ಕೃಷಿ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದರು.

ಅವರು ಇಂದು ನಗರದ ಎಂಎಸ್‌ಆರ್ ಸಂಸ್ಥೆಯ ದ್ವಾರಕಾ ಆಡಿಟೋರಿಯಂ ನಲ್ಲಿ ಕೃಷಿ ಇಲಾಖೆ, ನ್ಯೂಟ್ರಿಷಿಯನ್ ಅಂಡ್ ನ್ಯೂಟ್ರಾಸಿಟಿಕಲ್ ರೀಸರ್ಚ್ ಸೆಂಟರ್ ಹಾಗೂ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್ ಇವರ ಸಹಯೋಗದಲ್ಲಿ, ಸಿರಿಧಾನ್ಯಗಳ ಕುರಿತು ಆಹಾರ ತಜ್ಞರು ಹಾಗೂ ಬಾಣಸಿಗರಿಗೆ ಏರ್ಪಡಿಸಲಾಗಿದ್ದ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಗಮನ ಸೆಳೆಯುವಂತಹಾ ಕಾರ್ಯಕ್ರಮ ಇದಾಗಿದ್ದು, ಸಿರಿಧಾನ್ಯಗಳ ಬಳಕೆ, ಉತ್ತಮ ಜೀವನ ಶೈಲಿ ರೂಡಿಸಿಕೊಳ್ಳುವ ಬಗ್ಗೆ ವಿವಿದ ಪಾಲುದಾರರು ಪಾಲ್ಗೊಳ್ಳುವಿಕೆಯಿಂದ ಜಾಗೃತಿ ಮೂಡಿಸುವ ಕಾಯಾಕ್ರಮ ಹಮ್ಮಿಕೊಳ್ಳಲಾಗಿದೆ. ಹಳ್ಳಿಯಿಂದ ಪಟ್ಟಣದವರಿಗೆ, ಮಹಿಳೆಯರು ಮತ್ತು ಸಾಮಾನ್ಯ ಜನರಿಗೂ ಇವತ್ತು ಡಯಟ್ ನ ಅವಶ್ಯಕತೆ ಇದೆ. ಎಂ.ಎಸ್.ಆರ್ ಸಂಸ್ಥೆ ಸದಾ ಮುಂಚೂಣಿಯಲ್ಲಿದ್ದು, ಇಂತಹಾ ಸಾಮಾಜಿಕ

ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವುದು ಸಂತೋಷದ ಸಂಗತಿ. ಇದಕ್ಕೆ ಸರ್ಕಾರದ ನೆರವು ಸದಾ ಇರುತ್ತದೆ ಎಂದರು.

ಸಜ್ಜೆ, ನವಣೆ, ಜೋಳ, ರಾಗಿ, ಮುಂತಾದ ವೈವಿಧ್ಯಮಯ ಸಿರಿಧಾನ್ಯಗಳನ್ನು ಹೆಚ್ಚು ಹೆಚ್ಚು ಬಳಸುವುದರಿಂದ ಅವುಗಳಲ್ಲಿರುವ ನಾರಿನಂಶ, ಕಬ್ಬಿಣದ, ಮಿನರಲ್ಸ್ ಹಾಗೂ ಪ್ರೋಟೀನ್ ಅಂಶಗಳು ಹೆಚ್ಚಾಗಿದ್ದು ಆರೋಗ್ಯಕರವಾಗಿವೆ. ಇವುಗಳಿಂದ ದೋಸೆ, ಇಡ್ಲಿ, ಅನ್ನ, ಹೀಗೆ ಎಲ್ಲಾ ಬಗೆಯ ಆಹಾರ ಪದಾರ್ಥಗಳನ್ನು ತಯಾರಿಸುವ ವಿಧಾನವನ್ನು ಪ್ರತಿಯೊಬ್ಬರು ಅರಿತರೆ ಉಪಯೋಗಿಸಲು ಸುಲಭ ಎಂದರು.

ಸಿರಿದಾನ್ಯವು ಅಲ್ಪಾವಧಿ ಬೆಳೆಯಾಗಿದ್ದು, ಕಡಿಮೆ ನೀರು, ಕಡಿಮೆ ರಾಸಾಯನಿಕಗಳ ಬಳಕೆಯಿಂದ ಬೆಳೆಯಬಹುದಾಗಿದ್ದು, ರೈತರಿಗೆ ಆರ್ಥಿಕ ಹೊರೆಯೂ ಕಡಿಮೆಯಾಗುತ್ತದೆ. ವಾತಾವರಣ ಸಮತೋಲನಕ್ಕೆ ಇದು ಪೂರಕವಾಗಿದೆ ಎಂದರು. ವೈಜ್ಞಾನಿಕವಾಗಿಯೂ ಇದರ ಬಳಕೆ ಬಗ್ಗೆ ಜಾಗೃತಿ ಉಂಟಾಗಬೇಕು ಆ ಮೂಲಕ ಸಮರ್ಥನೀಯ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದರು.

ಎಂಎಸ್ಆರ್ ಸಂಸ್ಥೆ ಹಾಗೂ ಗೋಕುಲ ಎಜುಕೇಷನ್ ಸಂಸ್ಥೆಯ ಛೇರ್ಮನ್ ಡಾ॥ ಎಂ.ಆರ್. ಜಯರಾಮ್, **International Union of Nutritional Science (IUNS)** ನ ವೈಸ್ ಪ್ರೆಸಿಡೆಂಟ್ ಆದ ಡಾ॥ ವಿ. ಪ್ರಕಾಶ್, ಗೋಕುಲ ಎಜುಕೇಷನ್ ಫೌಂಡೇಷನ್ ಡೈರೆಕ್ಟರ್ ಎಂ.ಆರ್. ಕೋದಂಡರಾಮ್, **NNRC** ಛೇರ್ಮನ್ ಪ್ರಿಯಾ ಅರ್ಜುನ್ ಕೃಷಿ ಇಲಾಖೆಯ ನಿರ್ದೇಶಕರಾದ ಬಿ.ವೈ. ಶ್ರೀನಿವಾಸ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕಿಗಳಾಗಿ ಎನ್.ಐ.ಎನ್ ಹೈದ್ರಾಬಾದ್‌ನ ಡಾ॥ ಭಾಸ್ಕರಾಚಾರಿ, ರಿಜಿಸ್ಟರ್ಡ್ ಡಯಟಿಷಿಯನ್ ಜಿ.ಹೆಚ್. ಗೀತಾ, ಡಾ॥ ವಿಭಾ ಶೆಟ್ಟಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಪಿ.ಎಸ್.ಐ.

## <u>ದೂರದರ್ಶನದಲ್ಲಿ ನೆಲದ ಸಿರಿ ಸಾಕ್ಷ್ಯಚಿತ್ರ</u>

ಬೆಂಗಳೂರು, ಜುಲೈ 25(ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ಮಿಸಿರುವ ಸಾಕ್ಷ್ಯಚಿತ್ರಗಳನ್ನು ನೆಲದ ಸಿರಿ ಮಾಲಿಕೆಯಡಿ ದೂರದರ್ಶನ ಚಂದನ ವಾಹಿನಿಯಲ್ಲಿ ಸಂಜೆ 6:00 ರಿಂದ 6:15 ಅವಧಿಯಲ್ಲಿ ಪ್ರಸಾರ ಮಾಡಲಾಗುವುದು.

ದಿನಾಂಕ: 26-07-2017, ಬುಧವಾರ, ರೇಷ್ಮೇ ಉತ್ಪಾದನೆಯಲ್ಲಿ ಕರ್ನಾಟಕ ನಂ. 1
ದಿನಾಂಕ: 27-07-2017, ಗುರುವಾರ, ಕುಪ್ಪಳ್ಳಿ ಕವಿಶೈಲ ಮತ್ತು ಸುತ್ತಮುತ್ತಲಿನ ಪ್ರದೇಶ
ದಿನಾಂಕ: 28-07-2017, ಶುಕ್ರವಾರ, ಕಾಗಿನೆಲೆ ಹಾಗೂ ಸುತ್ತಮುತ್ತಲಿನ ಪ್ರದೇಶ
ವಿಷಯಗಳ ಕುರಿತು ಸಾಕ್ಷ್ಯಚಿತ್ರಗಳನ್ನು ಪ್ರಸಾರ ಮಾಡಲಾಗುವುದು.

## ಮೂಲ ದಾಖಲೆಗಳ ಪರಿಶೀಲನೆ –
## ಅರ್ಹ ಅಭ್ಯರ್ಥಿಗಳು ಅರ್ಹತಾ ಪಟ್ಟಿ ಪ್ರಕಟ

**ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)**

ಆಯೋಗದ ಅಧಿಸೂಚನೆ ದಿನಾಂಕ: 05-10-2016 ರಲ್ಲಿ ಮತ್ತು ಸೇರ್ಪಡೆ ಅಧಿಸೂಚನೆ ದಿನಾಂಕ: 22-10-2016 ರಲ್ಲಿ ಅಧಿಸೂಚಿಸಲಾಗಿರುವ ಈ ಕೆಳಕಂಡ ಹುದ್ದೆಗಳ 1:2 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಜುಲೈ 21 ರಂದು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಆಂಗ್ಲ ಬಾಷಾ ಶಿಕ್ಷಕರು – 41 (31+10 ಹೈ.ಕ.) ಹುದ್ದೆಗಳು, ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಗಣಕಯಂತ್ರ ಶಿಕ್ಷಕರು – 24 (17+07 ಹೈ.ಕ.) ಹುದ್ದೆಗಳು. ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾಜಿ ದೇಸಾಯಿ ವಸತಿ ಶಾಲೆಗಳಲ್ಲಿನ ದೈಹಿಕ ಶಿಕ್ಷಣ ಶಿಕ್ಷಕರು – 26 (18+ 08 ಹೈ.ಕ) ಹುದ್ದೆಗಳು, ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಥಮ ದರ್ಜೆ ಗಣಕ ಯಂತ್ರ ಸಹಾಯಕರು – 08 (06_02 ಹೈ.ಕ) ಹುದ್ದೆಗಳು, ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಪ್ರಥಮ ದರ್ಜೆ ಗಣಕ ಯಂತ್ರ ಸಹಾಯಕರು – 20 (13+7 ಹೈ.ಕ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ ಗಣತಿದಾರರು ಕಂ ಡಾಟಾ ಎಂಟ್ರಿ ಆಪರೇಟರ್ – 55 (49+06 ಹೈ.ಕ.) ಹುದ್ದೆಗಳು, ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಗ್ರಂಥಾಲಯ ಸಹಾಯಕರು 35 (ಹೈ.ಕ.) ಹುದ್ದೆಗಳು, ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಸಾಮಾನ್ಯ ವಿಜ್ಞಾನ ಶಿಕ್ಷಕರು – 18 (11+7 ಹೈ.ಕ.) ಹುದ್ದೆಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಯಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿನ ವಾರ್ಡನ್ (ಬಾಲಕ/ಬಾಲಕಿ) 443 (296+147 ಹೈ.ಕ.) ಹುದ್ದೆಗಳು.

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ಗೃಹ ಮಂಡಳಿಯಲ್ಲಿನ ಕಿರಿಯ ಅಭಿಯಂತರರು (ಸಿವಿಲ್) 08 (ಹೈ.ಕ.) ಹುದ್ದೆಗಳಿಗೆ ಆಯೋಗದ kpsc-ka@nic.in ಅಂತರ್ಜಾಲದಲ್ಲಿ ಜುಲೈ 21 ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಿದೆ. ಪ್ರಕಟಿಸಲಾದ ಏಳು ದಿನಗಳೊಳಗಾಗಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್ .

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಪೌರಾಡಳಿತ ನಿರ್ದೇಶನಾಲಯದಲ್ಲಿನ ನಗರಸಭೆ/ಪುರಸಭೆಗಳಲ್ಲಿನ ಕಿರಿಯ ಅಭಿಯಂತರರು (ಸಿವಿಲ್) 04=30 (ಹೈ.ಕ) ಹುದ್ದೆಗಳಿಗೆ ಆಯೋಗದ kpsc-ka@nic.inj ಅಂತರ್ಜಾಲದಲ್ಲಿ ಜುಲೈ 22 ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಿದೆ. ಪ್ರಕಟಿಸಲಾದ ಏಳು ದಿನಗಳೊಗಾಗಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್ .